Centre for Climate Change and Sustainability
ASHOKA UNIVERSITY

**3CS ಮೀಡಿಯಾ ಫೆಲೋಶಿಪ್**

**ಅಲ್ಪಸಂಖ್ಯಾತ ಸಮುದಾಯದಿಂದ ಹವಾಮಾನ ಪತ್ರಿಕೋದ್ಯಮ**

ಭಾರತದಲ್ಲಿನ ಹವಾಮಾನ ಬದಲಾವಣೆ ಮತ್ತು ಜನರ ಮೇಲಿನ ಅದರ ಪರಿಣಾಮದ, ಅದರಲ್ಲೂ ಮುಖ್ಯವಾಗಿ ಸಮಾಜದಲ್ಲಿರುವ ಅಲ್ಪಸಂಖ್ಯಾತರ ಬದುಕಿನ ಮೇಲೆ ಮಾಡುವ ಪರಿಣಾಮ, ಕುರಿತು ಮಾಡುವ ವರದಿಗಳನ್ನು 3CS ಮೀಡಿಯಾ ಫೆಲೋಶಿಪ್ ಪ್ರೋತ್ಸಾಹಿಸುತ್ತದೆ. ಕ್ಷೇತ್ರಕಾರ್ಯದಲ್ಲಿ ನಿರತರಾಗುವ ವರದಿಗಾರರಿಗೆ ಸಮರ್ಪಕ ಸಮಯ ಮತ್ತು ಸವಲತ್ತುಗಳನ್ನು ನೀಡಿದರೆ, ಯಾವ ಪತ್ರಿಕೋದ್ಯಮದ ಕಥನಗಳನ್ನು ಆಯ್ದುಕೊಂಡರೆ ಅವು ಹವಾಮಾನ ಬದಲಾವಣೆಯ ಕುರಿತು ಸಾರ್ವಜನಿಕ ಸಂವಾದವನ್ನು ಹುಟ್ಟು ಹಾಕಲು ಸಹಾಯ ಮಾಡುತ್ತವೆ? ನಿರ್ಗತಿಕರ ನಿತ್ಯಜೀವನದ ಮೇಲೆ ಹವಾಮಾನ ಬದಲಾವಣೆ ಎಂತಹ ಪರಿಣಾಮ ಬೀರುತ್ತದೆ? ಕಾಲಂತರದಲ್ಲಿ ಈ ಹವಾಮಾನ ಬದಲಾವಣೆಯು ಅಲ್ಪಸಂಖ್ಯಾತರ ಜೀವನೋಪಾಯ, ಆರೋಗ್ಯ ಮತ್ತು ಬದುಕಿನ ಮೇಲೆ ಯಾವ ಪರಿಣಾಮ ಬೀರುತ್ತವೆ?

ಇಂತಹ ವರದಿಗಳನ್ನು ಮಾಡ ಬಯಸುವ ಅವಕಾಶವಂಚಿತ ಸಮುದಾಯದ ಪತ್ರಕರ್ತರಿಗೆ ನೇರವಾಗಿ ಈ ಫೆಲೋಶಿಪ್ ಸಹಾಯ ಮಾಡುತ್ತದೆ. ಸದ್ಯಕ್ಕೆ ಈ ಮೀಡಿಯಾ ಫೆಲೋಶಿಪ್ ಕೇವಲ ಭಾರತ ಖಂಡದಲ್ಲಿನ ಹವಾಮಾನ ಬದಲಾವಣೆಯ ಪರಿಣಾಮದ ವರದಿಗಳನ್ನು ಮಾತ್ರ ಪರಿಗಣಿಸಿದರೂ, ಮುಂದಿನ ದಿನಗಳಲ್ಲಿ ಇತರ ಭೂಭಾಗಗಳಿಗೂ ವಿಸ್ತರಿಸುವ ನಿರೀಕ್ಷೆಯನ್ನಿಟ್ಟುಕೊಂಡಿದೆ. ಈ ವರದಿಯನ್ನು ಇಂಗ್ಲೀಷ್ ಭಾಷೆ ಅಥವಾ ಕರ್ನಾಟಕ, ಕೇರಳ, ತಮಿಳುನಾಡು, ಆಂಧ್ರಪ್ರದೇಶ, ತೆಲಾಂಗಣ ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಪಾಂಡಿಚೆರಿ, ಲಕ್ಷದ್ವೀಪ ಮತ್ತು ಅಂಡಮಾನ್-ನಿಕೋಬಾರ್ ದ್ವೀಪಗಳಿಗೆ ಸಂಬಂಧಿಸಿದ ಯಾವುದೇ ಭಾಷೆಯಲ್ಲಿ ಮಾಡಲು ಅರ್ಹರಾದವರು ಅರ್ಜಿ ಸಲ್ಲಿಸಬಹುದಗಿದೆ.

ಫೆಲೋಸಿಪ್ ಗ್ರಾಂಟ್ ಈ ಫೆಲೋಶಿಪ್ ಅನ್ನು ೪ ಪತ್ರಕರ್ತರಿಗೆ ನೀಡಲಾಗುವುದು. ಆದಿವಾಸಿ ಮತ್ತು ದಲಿತ ಪತ್ರಕರ್ತರಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಲಾಗುವುದು.

ಫೆಲೋಶಿಪ್ ಗ್ರಾಂಟ್ ೪ ಲಕ್ಷ ರೂಪಾಯಿಗಳಾಗಿದ್ದು, ಈ ಕೆಳಗಿನ ವೇಳಾಪಟ್ಟಿಯನ್ನು ಅವಲಂಬಿಸಿದೆ.

| | |
|---|---|
| ಏಪ್ರಿಲ್ 1 | ಆಯ್ಕೆಯಾದ ತಕ್ಷಣ 2 ಲಕ್ಷ ರೂಪಾಯಿಗಳು |
| ಮೇ 31 | ಪ್ರಗತಿಯ ವರದಿಯನ್ನು ಸಲ್ಲಿಸಬೇಕು (ಸಂಸ್ಥೆಯ ಮಾಹಿತಿಗಾಗಿ ಖರ್ಚು-ವೆಚ್ಚದ ಪಟ್ಟಿಯನ್ನು ನೀಡಬೇಕು) |
| ಸೆಪ್ಟಂಬರ್ 1 | 1 ಲಕ್ಷ ರೂಪಾಯಿಗಳು (ಅಂತಿಮವಾಗಿ ಕೂಲಂಕಷವಾಗಿ ತೀರ್ಮಾನಿಸಿದ ವರದಿಯ ವಿಷಯದ ರೂಪುರೇಷೆಗಳನ್ನು ಯಥಾಸ್ಥಿತಿಯಲ್ಲಿ ತಲುಪಿಸಬೇಕು) |
| ನವೆಂಬರ್ 1 | 1 ಲಕ್ಷ ರೂಪಾಯಿಗಳು (ಅಂತಿಮ ವರದಿಯ ಅನುವಾದ ಮತ್ತು ಖರ್ಚು-ವೆಚ್ಚದ ಪಟ್ಟಿಯನ್ನು ಸಲ್ಲಿಸಬೇಕು) |

ಫೆಲೋಷಿಪ್ ಕಾಲಾವಧಿ ಏಪ್ರಿಲ್ 1 ರಿಂದ ನವೆಂಬರ್ 30, 2022

| | |
|---|---|
| **ವರದಿ ಸಲ್ಲಿಸುವಿಕೆಯ ಮುಖ್ಯ ಅವಧಿ** ಏಪ್ರಿಲ್ 1 ರಿಂದ ನವೆಂಬರ್ 30, 2022 | |
| ಆಗಸ್ಟ್ 31 | ಆಯ್ಕೆ ಮಾಡಿಕೊಳ್ಳುವ ವಿಷಯದ ಕುರಿತು ಅಂತಿಮ ವಿವರಗಳು (500 ಪದಗಳು) |
| ಸೆಪ್ಟೆಂಬರ್ 30 | ಅಂತಿಮ ವರದಿಯ ಸಲ್ಲಿಸುವಿಕೆ |
| **ಅನುವಾದ ಮತ್ತು ಮೌಲ್ಯಮಾಪನ** ಅಕ್ಟೋಬರ್ 1 ರಿಂದ ಡಿಸೆಂಬರ್ 31, 2022 | |
| ಅಕ್ಟೋಬರ್ 1 ರಿಂದ ಅಕ್ಟೋಬರ್ 31 | ಅನುವಾದ |
| ಅಕ್ಟೋಬರ್ 15 ರಿಂದ ನವೆಂಬರ್ 15 | ಸಮಿತಿಯಿಂದ ಮೌಲ್ಯಮಾಪನ |

**ಪ್ರಕಟಣೆ** ಸಮಿತಿಯ ಮೌಲ್ಯಮಾಪನ ಮುಗಿದ 3 ತಿಂಗಳಿನೊಳಗೆ

ಯಾವಾಗ ಅರ್ಜಿ ಸಲ್ಲಿಸಬಹುದು? ಫೆಬ್ರವರಿ 1 - ಮಾರ್ಚ್ 15 ಒಳಗೆ ಪತ್ರಕರ್ತರು ಒಂದು ಪುಟದ ಪ್ರಸ್ತಾವನೆ ಸಲ್ಲಿಸಬೇಕು

ಪ್ರಸ್ತಾವನೆಯಲ್ಲಿ ಮುಖ್ಯವಾಗಿ ಏನಿರಬೇಕು? ಪತ್ರಕರ್ತರು ತಮ್ಮ ಅರ್ಜಿಯನ್ನು ಕೆಳಗಿನ ದಾಖಲೆಗಳೊಂದಿಗೆ 3cs.mediafellowship@ashoka.edu.in ವಿಳಾಸಕ್ಕೆ ಇಮೇಲ್ ಮಾಡಬೇಕು. ಇಮೇಲ್‌ನ ವಿಷಯವನ್ನು 'Application for 3CS Media Fellowship' ಎಂದು ನಮೂದಿಸಬೇಕು.

1. ವರದಿ ಮಾಡಬಹುದಾದ 5 ಬಗೆಯ ಅನನ್ಯ ವಿಷಯಗಳನ್ನು ಪಟ್ಟಿ ಮಾಡಬೇಕು. ಎಲ್ಲವೂ ಹವಾಮಾನ ಬದಲಾಣೆಯ ಪರಿಣಾಮಗಳ ಕುರಿತಾಗಿರಬೇಕು ಮತ್ತು ಸಮಾಜದಲ್ಲಿ ಧ್ವನಿ ಕೇಳದವರ ಕುರಿತಾಗಿರಬೇಕು. ಕಥನದ ಸ್ಥಳವನ್ನು ನಮೂದಿಸಬೇಕು. ಈ ೫ ವಿಷಯಗಳು ಒಂದಕ್ಕೊಂದು ಸಂಬಂಧಪಟ್ಟಿದ್ದು ಸರಣಿಯಲ್ಲಿ ಮಾಡಬಹುದಾದ ಆಳವಾದ ಅಧ್ಯಯನದ ಅವಶ್ಯಕತೆ ಹೊಂದಿರಬಹುದು ಅಥವಾ ಪ್ರತ್ಯೇಕ ವಿಷಯಗಳಾದರೂ ಆಗಿರಬಹುದು.

2. ಅಭ್ಯರ್ಥಿಯ ಸಂಪೂರ್ಣ ಸ್ವವಿವರಗಳು ಮತ್ತು ಈ ಹಿಂದೆ ಮಾಡಿದ ಎರಡು ವರದಿಗಳ ಉದಾಹರಣೆ ಲಗತ್ತಿಸಬೇಕು

3. ಯಾವುದಾದರೊಂದು ID ಕುರುಹನ್ನು ಲಗತ್ತಿಸಬೇಕು

ಯಾರು ಅರ್ಜಿ ಸಲ್ಲಿಸಬಹುದು? ದಕ್ಷಿಣ ಭಾರತದ ಪ್ರದೇಶಗಳಾದ ಕರ್ನಾಟಕ, ಆಂಧ್ರಪ್ರದೇಶ, ತೆಲಾಂಗಣ, ಕೇರಳ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶಗಳಾದ ಪಾಂಡಿಚೆರಿ, ಲಕ್ಷದ್ವೀಪ, ಅಂಡಮಾನ್-ನಿಕೋಬಾರ್ ಕಡೆಯ ಅಲ್ಪಸಂಖ್ಯಾತ ಸಮುದಾಯದ ಪತ್ರಕರ್ತರು ಅರ್ಜಿ ಸಲ್ಲಿಸಬಹುದು. ಆದಿವಾಸಿ ಮತ್ತು ದಲಿತ ಸಮುದಾಯದ ಪತ್ರಕರ್ತರಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ಮಹಿಳೆಯರು ಅರ್ಜಿಯನ್ನು ಸಲ್ಲಿಸಲು ಪ್ರೋತ್ಸಾಹಿಸಲಾಗುವುದು.

ಅರ್ಜಿಗಳ ನಿರ್ಣಯ ಮಾಡುವವರು ಯಾರು? ಮೂವರು ತಜ್ಞರ ಮುಖ್ಯ ಸಮಿತಿಯು ಈ ಕೆಲಸವನ್ನು ಮಾಡುತ್ತದೆ. ಅದರಲ್ಲಿ ಇಬ್ಬರು ಮಾಧ್ಯಮ ರಂಗದವರೂ, ಮತ್ತೊಬ್ಬರು ಹವಾಮಾನ ಬದಲಾವಣೆ ಮತ್ತು ಸುಸ್ಥಿರತೆಯ ಕೇಂದ್ರದವರಾಗಿರುತ್ತಾರೆ(3CS). ಅಂತಿಮ ನಿರ್ಣಯವನ್ನು ಯಾವುದೇ ಮುಚ್ಚುಮರೆಯಿಲ್ಲದೆ ಯೋಜಿತ ದಿನಾಂಕದಂದು ಪ್ರಕಟಿಸಲಾಗುವುದು.

ಪತ್ರಕರ್ತರು ಸಲ್ಲಿಸಿದ ಅಂತಿಮ ವರದಿಯ ಅನುವಾದವನ್ನು ಯಾರು ಮಾಡುತ್ತಾರೆ? ಹವಾಮಾನ ಬದಲಾವಣೆ ಮತ್ತು ಸುಸ್ಥಿರತೆಯ ಕೇಂದ್ರದವರು ಅನುವಾದಕ್ಕಾಗಿ ಸಹಾಯ ಮಾಡುತ್ತಾರೆ.

ಈ ವರದಿಗಳನ್ನು ಯಾರು ಪ್ರಕಟಿಸುತ್ತಾರೆ? ಪೂರ್ಣಗೊಂಡ ವರದಿಗಳನ್ನು ಪ್ರಕಟಿಸಲು ಹವಾಮಾನ ಬದಲಾವಣೆ ಮತ್ತು ಸುಸ್ಥಿರತೆಯ ಕೇಂದ್ರದವರು ಮಾಧ್ಯಮ ಮಿತ್ರರ ನೆರವನ್ನು ಕೋರುತ್ತಾರೆ.

---

ಈ ಪ್ರಕಟಣೆಯ ಕುರಿತು ಯಾವುದೇ ಅನುಮಾನಗಳಿದ್ದರೂ ನೇರವಾಗಿ 3cs.mediafellowship@ashoka.edu.in ಗೆ ಇಮೇಲ್ ಮಾಡಿ ಪರಿಹರಿಸಿಕೊಳ್ಳಬಹುದು.